# ಜಿಲ್ಲಾ ಪಂಚಾಯತ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಜಿಪಂಕ/ಕೈವಿ/ಆನ್‌ಲೈನ್ ಅರ್ಜಿ/2024-25 ದಿನಾಂಕ:16-08-2024.

## ಅಧಿಸೂಚನೆ

ಜಿಲ್ಲಾ ಪಂಚಾಯತ, ಕಲಬುರಗಿ (ಕೈಗಾರಿಕಾ ವಿಭಾಗ)ದ 2024-25ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆ (ಜಿಲ್ಲಾ ವಲಯ) ಅಡಿ ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಹೊಲಿಗೆ ವೃತ್ತಿನಿರತ ಮಹಿಳಾ ಕುಶಲಕರ್ಮಿಗಳಿಗೆ ಉಚಿತವಾಗಿ ವಿದ್ಯುತ್‌ಚಾಲಿತ ಹೊಲಿಗೆಯಂತ್ರಗಳನ್ನು ವಿತರಿಸಬೇಕಾಗಿದೆ. 2023-24ನೇ ಸಾಲಿನಲ್ಲಿ ಆಯ್ಕೆಯಾದ ನಂತರ ಇನ್ನುಳಿದ ಬಾಕಿ ಅರ್ಹ ಅರ್ಜಿಗಳನ್ನು2024-25ನೇ ಸಾಲಿನಲ್ಲಿ ಪರಿಗಣಿಸುವುದರೊಂದಿಗೆ ಬಾಕಿ ತಾಲೂಕುವಾರು ಹಾಗೂ ಪ್ರವರ್ಗವಾರು ಈ ಕೆಳಗಿನಂತೆ ಅರ್ಜಿಗಳು ಲಭ್ಯವಿಲ್ಲದ ಕಾರಣ ಈ ಕೆಳಗಿನಂತೆ ತಾಲೂಕುವಾರು ಹಾಗೂ ಪ್ರವರ್ಗವಾರು ಅರ್ಜಿಗಳನ್ನು ದಿನಾಂಕ:02-09-2024 ರಿಂದ ದಿ:20-09-2024ರ ವರೆಗೆ ವೆಬ್‌ಸೈಟ್:www.kalaburagi.nic.in ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

| ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ತಾಲೂಕು ಗುರಿ | | | | | | | | | | | |
|---|---|---|---|---|---|---|---|---|---|---|---|---|---|---|
| | | | ಅಫಜಲಪೂರ | ಆಳಂದ | ಚಿಂಚೋಳಿ | ಚಿತ್ತಾಪೂರ | ಕಾಳಗಿ | ಶಹಾಬಾದ | ಕಲಬುರಗಿ | ಕಮಲಾಪೂರ | ಜೇವರ್ಗಿ | ಯಡ್ರಾಮಿ | ಸೇಡಂ | ಒಟ್ಟು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆ (ವಿದ್ಯುತಚಾಲಿತ ಹೊಲಿಗೆಯಂತ್ರ) | ಪರಿಶಿಷ್ಟ ಜಾತಿ | 125 | 18 | 15 | 15 | 10 | 11 | 05 | 09 | 07 | 11 | 09 | 15 | 125 |
| | ಪರಿಶಿಷ್ಟ ಪಂಗಡ | 50 | 07 | 06 | 07 | 04 | 04 | 02 | 03 | 03 | 04 | 04 | 06 | 50 |
| | ಅಲ್ಪ ಸಂಖ್ಯಾತ | 58 | 08 | 08 | 07 | 04 | 05 | 02 | 05 | 03 | 05 | 04 | 07 | 58 |
| | ಇತರೆ | 332 | 48 | 43 | 42 | 24 | 26 | 12 | 26 | 19 | 29 | 24 | 39 | 332 |
| ಒಟ್ಟು | | **565** | **81** | **72** | **71** | **42** | **46** | **21** | **43** | **32** | **49** | **41** | **67** | **565** |

**ಅರ್ಹತೆಗಳು:**

- ವಿದ್ಯುತಚಾಲಿತ ಹೊಲಿಗೆಯಂತ್ರ ಪಡೆಯುವುದಕ್ಕಾಗಿ ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 21 ವರ್ಷ ಹಾಗೂ ಗರಿಷ್ಠ 45 ವರ್ಷಗಳು ಇರತಕ್ಕದ್ದು. (ಅರ್ಜಿ ಸಲ್ಲಿಸುವ ಮೊದಲನೇ ದಿನಾಂಕವಾದ 02-09-2024 ರಂದು)
- ಅರ್ಜಿದಾರರು ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು.
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರಕಾರದ ಯಾವುದೇ ಯೋಜನೆಯಡಿ ಈಗಾಗಲೇ ಹೊಲಿಗೆಯಂತ್ರವನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಆನ್‌ಲೈನ್‌ನಲ್ಲಿ www.kalaburagi.nic.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

* **ಅಪ್ಲೋಡ್ ಮಾಡಬೇಕಾದ ದಾಖಲೆಗಳು. (ಸ್ವಯಂ ದೃಢೀಕೃತ ಪ್ರತಿಗಳು)**

1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ (in JPG format).
2) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ., ಅಂಕಪಟ್ಟಿ/ ಇನ್ನಿತರ ಪ್ರಮಾಣ ಪತ್ರ) (in PDF format).
3) ಶೈಕ್ಷಣಿಕ ಅರ್ಹತೆ (ವರ್ಗಾವಣೆ ಪ್ರಮಾಣ/ ಅಂಕಪಟ್ಟಿ) (in PDF format).
4) ಜಾತಿ ಪ್ರಮಾಣ ಪತ್ರ. (in PDF format).
5) ಪಡಿತರ ಚೀಟಿ (in PDF format).
6) ಆಯಾ ಗ್ರಾಮ ಪಂಚಾಯತಿಯ, ಪಂಚಾಯತ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೇಲರಿಂಗ್) ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ. (in PDF format).

**ಆಯ್ಕೆ ಪ್ರಕ್ರಿಯೆ:** ನಿಗದಿಪಡಿಸಿರುವ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ: ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ, ಕಲಬುರಗಿ, ಜಿಲ್ಲಾ ಕೈಗಾರಿಕಾ ಕೇಂದ್ರ, 1ನೇ ಮಹಡಿ, ವಿಶೇಷ ನಿವೇಷನ ಸಂಖ್ಯೆ:ಎಸಪಿಎಲ್-16, ಕೈಗಾರಿಕಾ ವಸಾಹತು, ಜೇವರ್ಗಿ ಕ್ರಾಸ್, ಎಂ.ಎಸ್.ಕೆ. ಮಿಲ್ಲ್ ರಸ್ತೆ, ಕಲಬುರಗಿ ಅಥವಾ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಗೆ ಸಂಪರ್ಕಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಕಲಬುರಗಿ.